## ಬೆಳದಿಂಗಳ ಸಂಗೀತ 188

**9 ಜೂನ್ 2017**

ಗಾಯನ

**ವಿದುಷಿ ಎಚ್.ಜಿ. ಚೈತ್ರ**

ಹಾರ್ಮೋನಿಯಂ

**ಪಂ. ವೀರಭದ್ರಯ್ಯ ಹಿರೇಮಠ**

ತಬಲ

**ಪಂ. ಎಚ್.ಎಸ್. ಗೋಪಿನಾಥ್**

**ತಮಗೆ ಆದರದ ಸ್ವಾಗತ**


Phone: 0821-2548220, 2548221
Fax : 0821-2548219
email: jssashram@yahoo.com


### ಶ್ರೀ ಸುತ್ತೂರು ಮಠ

**ಮೈಸೂರು ಶಾಖೆ, ಮೈಸೂರು**

# ಬೆಳದಿಂಗಳ ಸಂಗೀತ 187

**10 ಮೇ 2017 * ಬುಧವಾರ * ಸಂಜೆ 6.00**

ದಿವ್ಯ ಸಾನ್ನಿಧ್ಯ

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ



ಗಾಯನ

**ವಿದ್ವಾನ್ ಎನ್.ಆರ್. ಪ್ರಶಾಂತ್**



ಮೃದಂಗ

**ವಿದ್ವಾನ್ ಎ. ರಾಧೇಶ್**

ವಯೊಲಿನ್

**ವಿದ್ವಾನ್ ಸಿ.ಎನ್. ತ್ಯಾಗರಾಜನ್**



ಕರ್ನಾಟಕದ ಖ್ಯಾತ ಸಂಗೀತಗಾರರಲ್ಲಿ ವಿದ್ವಾನ್ ಎನ್.ಆರ್. ಪ್ರಶಾಂತ್ ಅವರು ಮುಂಚೂಣಿಯಲ್ಲಿ ನಿಲ್ಲುತ್ತಾರೆ. ಇವರು ಸಂಗೀತದಲ್ಲಿ ಸದಾ ಹೊಸತನ್ನು ಅರಸುವ ಪ್ರತಿಭಾವಂತರು; ಜೊತೆಜೊತೆಗೆ ಸಾಂಪ್ರದಾಯಿಕತೆಯನ್ನೂ ಪೋಷಿಸಿ ಕೊಂಡು ಸಂಗೀತಕ್ಕೆ ಒಂದು ನವೀನ ಕಾಂತಿಯನ್ನು ತಂದುಕೊಡುವ ಅಪರೂಪದ ಕಲಾವಿದರು. ರಾಗಶುದ್ಧತೆ, ಗಮಕದ ನಡೆಗಳಲ್ಲಿ ಪರಿಶುದ್ಧತೆ, ಕಲ್ಪನಾಸಾಮರ್ಥ್ಯ ಹಾಗೂ ಲಯದಲ್ಲಿ ನೈಪುಣ್ಯ ಇವರ ಹಾಡುಗಾರಿಕೆಯ ವೈಶಿಷ್ಟ್ಯ.

ಸಂಗೀತ ಕಲಿಕೆಯ ಪ್ರಾರಂಭದ ದಿನಗಳಲ್ಲಿ ಶ್ರೀ ಪ್ರಶಾಂತ್ ಅವರು ಸ್ವಲ್ಪಕಾಲ ಮೈಸೂರು ಅರಮನೆಯ ವಿದ್ವಾಂಸರಾದ ಶ್ರೀ ತಿಟ್ಟೆ ಕೃಷ್ಣಸ್ವಾಮಿ ಅಯ್ಯಂಗಾರ್‌ರ ಬಳಿ ಶಿಷ್ಯವೃತ್ತಿ ಮಾಡಿದರು. ಬಳಿಕ ವಿದ್ವಾನ್ ಆರ್.ಕೆ. ಪದ್ಮನಾಭರ ಬಳಿ ಸಂಗೀತ ಕಲಿತು ಮೈಸೂರು ವಾಸುದೇವಾಚಾರ್ಯರ ಮತ್ತು ಶ್ರೀ ವಾದಿರಾಜ ಸ್ವಾಮಿಗಳ ರಚನೆಗಳನ್ನು ಕರತಲಾಮಲಕ ಮಾಡಿಕೊಂಡರು. ಸ್ವಲ್ಪ ಕಾಲ ವಿದುಷಿ ಶ್ರೀಮತಿ ನೀಲಾ ರಾಮಗೋಪಾಲರ ಶಿಷ್ಯರಾಗಿ ಸಂಸ್ಕೃತ, ತೆಲುಗು ಮತ್ತು ತಮಿಳು ಭಾಷೆಯ ಹಲವಾರು ಕೃತಿಗಳನ್ನು ತಮ್ಮದಾಗಿಸಿಕೊಂಡರು.

ವಿದ್ವಾನ್ ಪ್ರಶಾಂತ್ ಅವರು ಮೈಸೂರು ವಿಶ್ವವಿದ್ಯಾನಿಲಯದಿಂದ ಬಿ.ಇ. (ಇನ್ಸ್ಟ್ರುಮೆಂಟೇಷನ್ ಟೆಕ್ನಾಲಜಿ) ಪದವಿ ಪಡೆದಿದ್ದಾರೆ. ಆಕಾಶವಾಣಿಯ ಬಿ–ಹೈ ಶ್ರೇಣಿಯ ಕಲಾವಿದರಾಗಿ ಸಂಗೀತವನ್ನೇ ತಮ್ಮ ಕಾರ್ಯಕ್ಷೇತ್ರವನ್ನಾಗಿಸಿಕೊಂಡಿದ್ದಾರೆ.

ವಿದ್ವಾನ್ ಪ್ರಶಾಂತ್‌ರವರು ಹಲವಾರು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ತಮ್ಮ ಗಾನಕಲೆಯನ್ನು ಪ್ರದರ್ಶಿಸಿ ಜನಾನುರಾಗವನ್ನು ಗಳಿಸಿದ್ದಾರೆ. “ಏಕರಾಗ ಕಚೇರಿ” ಪ್ರಸ್ತುತಿ ಇವರ ವೈಶಿಷ್ಟ್ಯ; ಭಾರತದಲ್ಲಿ ಮತ್ತು ವಿದೇಶಗಳಲ್ಲಿ ಈ ಕಾರ್ಯಕ್ರಮ ತುಂಬ ಜನಮನ್ನಣೆ ಪಡೆದಿದೆ.

ವಿದ್ವಾನ್ ಪ್ರಶಾಂತ್ ಅವರು ಸಿಂಗಪುರ್ ಇಂಡಿಯನ್ ಫೈನ್ ಆರ್ಟ್ಸ್ ಸೊಸೈಟಿಯಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತದ ಅಧ್ಯಾಪಕರಾಗಿ ಆರು ವರ್ಷ ಸೇವೆ ಸಲ್ಲಿಸಿದ್ದಾರೆ. 2012 ಅನಂತರ ಮೂರು ವರ್ಷ ಕಾಲ ಅಕ್ಯಾಡೆಮಿ ರಿಜಿಸ್ಟ್ರಾರ್ ಆಗಿ ಮತ್ತು ಪ್ರಧಾನ ಶಿಕ್ಷಕರಾಗಿ ಸೇವೆ ಸಲ್ಲಿಸಿದ್ದಾರೆ.

ವಿದ್ವಾನ್ ಶ್ರೀ ಸಿ.ಎನ್. ತ್ಯಾಗರಾಜನ್‌ರವರು ವಯೊಲಿನ್ ಸಹಕಾರ ನೀಡುತ್ತಿದ್ದಾರೆ. ಇವರು ಕೂಡ ಸಿಂಗಪುರ್ ಇಂಡಿಯನ್ ಫೈನ್ ಆರ್ಟ್ಸ್ ಸೊಸೈಟಿಯಲ್ಲಿ ವಯೊಲಿನ್ ಶಿಕ್ಷಕರಾಗಿ ಖ್ಯಾತರಾಗಿದ್ದಾರೆ. ಮೈಸೂರಿನ ಯುವ ಪ್ರತಿಭಾವಂತ ಶ್ರೀ ಎ. ರಾಧೇಶ್ ಅವರು ಮೃದಂಗ ವಾದನದ ಮೂಲಕ ಸಹಕರಿಸಲಿದ್ದಾರೆ.